# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳ

ಜಿಲ್ಲಾ ನ್ಯಾಯಾಲಯ ಆವರಣ ಕೊಪ್ಪಳ dlsakoppal1@gmail.com Phone : 9141193951

# DISTRICT LEGAL SERVICES AUTHORITY, KOPPAL.

District Court Complex, Koppal dlsakoppal1@gmail.com Phone : 9141193951
08539-220233

**ಅಧಿಸೂಚನೆ ಸಂಖ್ಯೆ: 02/2023, ದಿನಾಂಕ: 01-12-2023.**

**ವಿಷಯ** : ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳ ಕಾನೂನು ಅಭಿರಕ್ಷಕರ ಕಛೇರಿಯಲ್ಲಿ 1. ಆಡಳಿತ ಸಹಾಯಕ/ಗುಮಾಸ್ತ 2.ಸ್ವಾಗತಕಾರರು–ವ–ಡಾಟಾ ಎಂಟ್ರಿ ಆಪರೇಟರ್ ಮತ್ತು 3.ಜವಾನ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಭರ್ತಿ ಮಾಡಲು ಅರ್ಜಿಗಳನ್ನು ಅಹ್ವಾನಿಸಿರುವ ಕುರಿತು.

**ಉಲ್ಲೆಖ:** 1. ಮಾನ್ಯ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಪತ್ರ ಸಂಖ್ಯೆ:31/ LADC-Human Resources/2023 ದಿನಾಂಕ: 17.11.2023.

2. NALSA-Legal Aid Defence Counsel Modified Scheme-2022.

* * *

***ಪ್ರಸ್ತಾವನೆ***

ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕೊಪ್ಪಳ ಕಾನೂನು ಅಭಿರಕ್ಷಕರ ಕಛೇರಿಯಲ್ಲಿ 1.ಆಡಳಿತ ಸಹಾಯಕ/ಗುಮಾಸ್ತ 2. ಸ್ವಾಗತಕಾರರು–ವ–ಡಾಟಾ ಎಂಟ್ರಿ ಆಪರೇಟರ್ ಮತ್ತು 3. ಜವಾನ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಅಂದರೆ 6 ತಿಂಗಳು ಅಥವಾ ಮುಂದುವರೆಯಬಹುದಾದ ಅವಧಿಗೆ ಹುದ್ದೆಗಳನ್ನು ತುಂಬಿಕೊಳ್ಳಲು ಉಲ್ಲೇಖದಲ್ಲಿ ತಿಳಿಸಲಾಗಿರುತ್ತದೆ. ಅದೇ ರೀತಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾದಿಕಾರ, ಬೆಂಗಳೂರು ಇವರ ಪತ್ರ ದಿನಾಂಕ:17–11–2023 ರಲ್ಲಿ ಮೆಲ್ಕಂಡ ಹುದ್ದೆಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಹತೆ ವೇತನ ಮತ್ತು ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಹುದ್ದೆಯ ಕಾಲಾವಧಿ ಇತ್ಯಾದಿ ಬಗ್ಗೆ ತಿಳಿಸಲಾಗಿರುತ್ತದೆ.

1. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಆಡಳಿತ ಸಹಾಯಕ/ಗುಮಾಸ್ತ ಗುತ್ತಿಗೆ ಆಧಾರದ ಮೇಲೆ ಓದಲಾದ 1 ಮತ್ತು 2ರಲ್ಲಿ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 1. | ಆಡಳಿತ ಸಹಾಯಕ/ಗುಮಾಸ್ತ | 01 | ರೂ.19000/- |

**ವಿದ್ಯಾರ್ಹತೆ:**

- ಆಡಳಿತ ಸಹಾಯಕ/ಗುಮಾಸ್ತ ಹುದ್ದೆಗೆ ಸರ್ಕಾರದಿಂದ ಮಾನ್ಯಗೊಂಡಂತಹ ಯಾವುದೇ ವಿಶ್ವವಿದ್ಯಾಲಯದಿಂದ ಪದವಿ ವಿದ್ಯಾರ್ಹತೆಯನ್ನು ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಹಾಗೂ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವಂತಹ ಸೂಕ್ತ/ಯೋಗ್ಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

2. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಸ್ವಾಗತಕಾರರು-ವ-ಡಾಟಾ ಎಂಟ್ರಿ ಆಪರೇಟರ್ ಗುತ್ತಿಗೆ ಆಧಾರದ ಮೇಲೆ ಓದಲಾದ 1 ಮತ್ತು 2ರಲ್ಲಿ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 1. | ಸ್ವಾಗತಕಾರರು-ವ-ಡಾಟಾ ಎಂಟ್ರಿ ಆಪರೇಟರ್ | 01 | ರೂ.17271/- |

**ವಿದ್ಯಾರ್ಹತೆ:**

- ಸರ್ಕಾರದಿಂದ ಮಾನ್ಯಗೊಂಡಂತಹ ಯಾವುದೇ ವಿಶ್ವವಿದ್ಯಾನಿಲಯದಿಂದ ಪದವಿ ವಿದ್ಯಾರ್ಹತೆಯನ್ನು ಬರಹ ಮತ್ತು ವಾಕ್ಯದ ಮೂಲಕ ಸಂಭಾಷಣಾ ಸಾಮರ್ಥ್ಯವನ್ನು ಹೊಂದಿರಬೇಕು ಪೋನ್, ಫಾಕ್ಸ ಮತ್ತು ಸ್ವಿಚ್ ಬೋರ್ಡ ಇತ್ಯಾದಿ ಉಪಯೋಗಿಸಲು ಅನುಭವ ಹೊಂದಿರಬೇಕು ಹಾಗೂ ನಿಖರವಾಗಿ ಮತ್ತು ವೇಗವಾಗಿ ಬೆರಳಚ್ಚು ಮಾಡುವ ಸಾಮರ್ಥ್ಯವನ್ನು ಹೊಂದಿರಬೇಕು ಕಂಪ್ಯೂಟರ್ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಹಾಗೂ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವಂತಹ ಸೂಕ್ತ/ಯೋಗ್ಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

3. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೊಪ್ಪಳ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಜವಾನ ಗುತ್ತಿಗೆ ಆಧಾರದ ಮೇಲೆ ಓದಲಾದ 1 ಮತ್ತು 2ರಲ್ಲಿ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 1. | ಜವಾನ | 01 | ರೂ.15202/- |

**ವಿದ್ಯಾರ್ಹತೆ:**

- ಸರ್ಕಾರದಿಂದ ಮಾನ್ಯಗೊಂಡಂತಹ ಕನಿಷ್ಟ 10 ನೇ ತರಗತಿ ಅಥವಾ ಎಸ್.ಎಸ್.ಎಲ್.ಸಿ. ಪಾಸಾಗಿರಬೇಕು ಮತ್ತು ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಇರುವಂತಹ ಸೂಕ್ತ/ಯೋಗ್ಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

**4. ಅರ್ಜಿ ಸಲ್ಲಿಕೆಯ ದಿನಾಂಕ:**

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 12-12-2023

**5. ಅರ್ಜಿ ಸಲ್ಲಿಸುವ ವಿಧಾನ:**

ಅರ್ಹ ಅಭ್ಯರ್ಥಿಗಳು ಈ ಅಧಿಸೂಚನೆಯೊಂದಿಗೆ ನೀಡಿರುವ ನಮೂನೆಯಲ್ಲಿ ತಮ್ಮ ಸಂಪೂರ್ಣ ಮಾಹಿತಿಯನ್ನು ಭರ್ತಿಮಾಡಿ ಸೂಕ್ತ ದಾಖಲೆಗಳೊಂದಿಗೆ ಹಾಗೂ ಪಾಸ್‌ಪೋರ್ಟ್ ಅಳತೆಯ 2 ಇತ್ತೀಚಿನ ಭಾವಚಿತ್ರಗಳೊಂದಿಗೆ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣ, ಕೊಪ್ಪಳ ಇಲ್ಲಿಗೆ ಕೊನೆಯ ದಿನಾಂಕದೊಳಗಾಗಿ ಅಂದರೆ ದಿನಾಂಕ:12-12-2023 ರೊಳಗಾಗಿ ಸಲ್ಲಿಸತಕ್ಕದ್ದು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**6. ನೇಮಕಾತಿ ವಿಧಾನ:**

ಸಂದರ್ಶನ, ಕೌಶಲ್ಯ, ಕಂಪ್ಯೂಟರ್ ಮತ್ತು ಬೆರಳಚ್ಚು ನಿಖರತೆ ಮತ್ತು ನೈಪುಣ್ಯತೆ ಆಧಾರಿಸಿ ನೇರ ನೇಮಕಾತಿ

7. **ಷರತ್ತುಗಳು:**

- ಸದರಿ ಹುದ್ದೆಗೆ ಅಭ್ಯರ್ಥಿಗಳನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು ಹಾಗೂ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ 6 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗ) ನೇಮಕ ಮಾಡಿಕೊಳ್ಳಲಾಗುವುದು.

- ಸದರಿ ಹುದ್ದೆಗೆ ನಿಗದಿಗೊಳಿಸಿರುವ ಮಾಸಿಕ ಸಂಭಾವನೆಯು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನಿರ್ಧರಿಸಲ್ಪಟ್ಟಿದ್ದು, ಈ ಕುರಿತು ಸರ್ಕಾರದಿಂದ ಅಥವಾ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ಮುಂದೆ ಹೊರಡಿಸಬಹುದಾದ ಮಾರ್ಗಸೂಚಿಗಳಿಗೆ ಅನುಸಾರ ಬದಲಾವಣೆಗೆ ಒಳಪಡುವಂತಹ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

- ನೇಮಕಗೊಂಡ ಅಭ್ಯರ್ಥಿಯು ಅಗತ್ಯಬಿದ್ದರೆ ಸಾರ್ವತ್ರಿಕ ರಜಾ ದಿನಗಳಲ್ಲೂ ಸಹ ಕಚೇರಿ ಕರ್ತವ್ಯಕ್ಕೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದ್ದು.

- ನೇಮಕಗೊಂಡ ಅಭ್ಯರ್ಥಿಗಳು ತಮ್ಮ ಕರ್ತವ್ಯದಲ್ಲಿ ಸದಾ ಶಿಸ್ತುಬದ್ಧರಾಗಿರತಕ್ಕದ್ದು ಹಾಗೂ ಯಾವುದೇ ದುರ್ನಡತೆ, ಅಶಿಸ್ತು ತೋರಿದರೆ ಅಥವಾ ಹಣಕಾಸು ದುರುಪಯೋಗ ಮಾಡಿರುವುದು ಕಂಡುಬಂದಲ್ಲಿ ನಿಯಮಾನುಸಾರ ಶಿಕ್ಷೆಗೆ ಮತ್ತು ದಂಡನೆಗೆ ಗುರಿಪಡಿಸಲಾಗುವುದು.

- ಯಾವುದೇ ಕಾರಣಗಳಿಂದ ಅಭ್ಯರ್ಥಿಗಳು ತಮ್ಮ ಹುದ್ದೆಯನ್ನು ತ್ಯಜಿಸಲು ಇಚ್ಚಿಸಿದರೆ ಆ ಕುರಿತು ಒಂದು ತಿಂಗಳ ಮುಂಚಿತವಾಗಿ ಪ್ರಾಧಿಕಾರಕ್ಕೆ ಮಾಹಿತಿ ನೀಡತಕ್ಕದ್ದು.

- ನೇಮಕಗೊಂಡ ಅಭ್ಯರ್ಥಿಗಳು ಸರ್ಕಾರ ವಿಧಿಸಿರುವ ನೀತಿ ನಿಯಮಗಳಿಗೆ ಬದ್ಧರಾಗಿರತಕ್ಕದ್ದು ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸತಕ್ಕದ್ದು.

- **ವಿಶೇಷ ಸೂಚನೆ** :- ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ದೂರವಾಣಿ ಅಥವಾ ಸಂದೇಶದ ಮೂಲಕ ಮಾತ್ರ ಕಳುಹಿಸಲಾಗುವುದು.

ಗೌರವಾನ್ವಿತ ಅಧ್ಯಕ್ಷರು ಜಿ.ಕಾ.ಸೇ.ಪ್ರಾ., ಕೊಪ್ಪಳ
ಇವರ ಆದೇಶದ ಮೇರೆಗೆ

1.12 2023

(ದೇವೇಂದ್ರ ಪಂಡಿತ್)
ಹಿರಿಯ ಸಿವಿಲ್ ನ್ಯಾಯಾಧೀಶರು &
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಕೊಪ್ಪಳ.

ದಿನಾಂಕ: 01/12/2023
ಸ್ಥಳ: ಕೊಪ್ಪಳ

APPLICATION FOR THE POST OF **OFFICE ASSISTANT/CLERK, RECEPTIONIST-cum- DATA ENTRY OPERATOR, DALAYATH** in Legal Aid Defense Counsel office.

Name of the District:

**PHOTO**

| | |
|---|---|
| Name of the Applicant | |
| Name of the his/her Father/Husband | |
| Date of Birth and Age | |
| Gender | |
| Postal address | |
| Educational Qualifications | |
| Mobile No | |
| Email ID | |

Place:

Date

Signature